**MKN(P)05**

Sl.No. : **Total No. of Pages : 2**

**ಪ್ರಥಮ ವರ್ಷದ ಎಂ.ಎ. ವಾರ್ಷಿಕ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್–2023**

**(SLM Scheme : Non CBCS)**

**ಕನ್ನಡ**

**ಕೋರ್ಸ್–V : ಜಾನಪದ ತತ್ತ್ವಗಳು ಮತ್ತು ಸಾಹಿತ್ಯ**

**ಸಮಯ : 3 ಗಂಟೆಗಳು** **ಗರಿಷ್ಠಾಂಕಗಳು : 80**

**ವಿಭಾಗ–ಎ**

ನಾಲ್ಕನ್ನು ಕುರಿತು ಟಿಪ್ಪಣಿ ಬರೆಯಿರಿ. **[4×5=20]**

***ಪ್ರ1)*** ಜೀ.ಶಂ. ಪರಮಶಿವಯ್ಯ.

***ಪ್ರ2)*** ಪ್ರಾಣಿ ಕಥೆಗಳು

***ಪ್ರ3)*** ಕುಲದೇವತಾರಾಧನೆ

***ಪ್ರ4)*** ಜನಪದ ರಂಗಭೂಮಿಯ ಪ್ರಸ್ತುತತೆ

***ಪ್ರ5)*** ಸಂಗೋಳ್ಳಿ ರಾಯಣ್ಣನ ದಂಗೆ

***ಪ್ರ6)*** ಜನಪದ ಗೀತೆಗಳ ಮಹತ್ವ

## ವಿಭಾಗ–ಬಿ

ಮೂರು ಪ್ರಶ್ನೆಗಳಿಗೆ ಉತ್ತರಿಸಿ: **[3×10=30]**

***ಪ್ರ7)*** ಜನಪದ ಸಾಹಿತ್ಯ ರೂಪಗಳ ಸ್ವರೂಪವನ್ನು ತಿಳಿಸಿ ಹಾಗೂ ಜನಪದ ಗೀತೆ ಮತ್ತು ಲಾವಣಿಗಳ ಮಹತ್ವವನ್ನು ವಿವರಿಸಿ.

***ಪ್ರ8)*** 'ಜನಪದ ಗೀತಾಂಜಲಿಯಲ್ಲಿ' ವ್ಯಕ್ತಗೊಂಡಿರುವ ಬಂಜೆಯ ಬವಣೆಯ ಬಗೆಯನ್ನು ವಿಶ್ಲೇಷಿಸಿ.

***ಪ್ರ9)*** ಗಾದೆಗಳಲ್ಲಿನ ಸಾಂಸ್ಕೃತಿಕ ಮಹತ್ವವನ್ನು ಕುರಿತು ಚರ್ಚಿಸಿ.

***ಪ್ರ10)***'ಸಂಗ್ಯಾ ಬಾಳ್ಯಾ' ನಾಟಕದಲ್ಲಿ ಮೂಡಿಬಂದಿರುವ ಸಂಗ್ಯಾ, ಬಾಳ್ಯಾ, ಮತ್ತು ಗಂಗಿಯ ಪಾತ್ರ ವೈಶಿಷ್ಟ್ಯತೆಗಳನ್ನು ವಿವರಿಸಿ.

***ಪ್ರ11)***ಜನಪದರ ಬೌದ್ಧಿಕ ಪ್ರತಿಭೆ ಒಗಟುಗಳಲ್ಲಿ ಹೇಗೆ ವ್ಯಕ್ತವಾಗಿದೆ? ಸೂಕ್ತ ಉದಾಹರಣೆಗಳೊಂದಿಗೆ ವಿಶ್ಲೇಷಿಸಿ.

## ವಿಭಾಗ–ಸಿ

ಒಂದು ಪ್ರಶ್ನೆಗೆ ಉತ್ತರಿಸಿ. **[1×15=15]**

***ಪ್ರ12)*** ಜಾನಪದ ಎಂದರೇನು? ಜಾನಪದ ಸಿದ್ಧಾಂತಗಳ ಮಹತ್ವವನ್ನು ಕುರಿತು ಬರೆಯಿರಿ.

***ಪ್ರ13)*** ಕರ್ನಾಟಕದಲ್ಲಿನ ಜಾನಪದ ಅಧ್ಯಯನದ ಬೆಳವಣಿಗೆಯನ್ನು ವಿವರಿಸಿ.

ಒಂದು ಪ್ರಶ್ನೆಗೆ ಉತ್ತರಿಸಿ. **[1×15=15]**

***ಪ್ರ14)*** ಕನ್ನಡ ಜನಪದ ಕಥೆಗಳಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಕುರಿತು ಚರ್ಚಿಸಿ.

***ಪ್ರ15)***'ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು' ಸಂಕಲನದ ಸಾಂಸ್ಕೃತಿಕ ಮಹತ್ವವನ್ನು ಕುರಿತು ಬರೆಯಿರಿ.